# ಮಹಾತ್ಮಗಾಂಧೀ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಯವರ ಜನ್ಮ ದಿನಾಚರಣೆ.




ಕಿರಿಮಂಜೇಶ್ವರ ಶುಭದಾಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಹಾತ್ಮಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಯವರ ಜನ್ಮದಿನಾಚರಣೆಆಚರಿಸಲಾಯಿತು. ಶಾಲಾ ಆವರಣ ಸ್ವಚ್ಚತಾಕಾರ್ಯಕ್ರಮದೊಂದಿಗೆಆರಂಭಗೊಂಡಿತು.ಆಡಳಿತ ಮಂಡಳಿಯ ಸದಸ್ಯರು, ಶಿಕ್ಷಕರು ಬೋಧಕೇತರ ಸಿಬ್ಬಂದಿ ಶಾಲಾ ಆವರಣವನ್ನು ಸ್ವಚ್ಚಗೊಳಿಸಿ ನಂತರ ನಡೆದ ಸಭಾಕಾರ್ಯಕ್ರಮದಲ್ಲಿಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಶಿಕ್ಷಕಿ ಅನಿತಾಗಾಂಧೀಜಿಯವರವಿಚಾರ ದಾರೆಗಳನ್ನು ತಿಳಿಸಿದರುಅವರಆಶಯದಂತೆ ನಾವು ಸ್ವಚ್ಚತೆಗೆ ಮೊದಲ ಆಧ್ಯತೆ ನಿಡೋಣ, ಸಾರ್ವಜನಿಕ ಸ್ಥಳಗಳಲ್ಲಿ ನಾವೆಲ್ಲತಪ್ಪದೇ ಮಾಸ್ಕ್‌ಧರಿಸೋಣ ಸಾರ್ವಜನೀಕಅಂತರ ಕಾಯ್ದುಕೊಳ್ಳುವುದರ ಮೂಲಕ ಕೋವಿಡ್–19ನ್ನು ಜಯಿಸೋಣಎಂದರು.ಶಿಕ್ಷಕ ರಾಘವೇಂದ್ರ ಲಾಲ್ ಬಹದ್ದೂರ್ ಶಾಸ್ತ್ರಿಯವರ ವಿಚಾರ ದಾರೆಗಳನ್ನು ತಿಳಿಸಿದರು. ಮಹಾನ್ ನಾಯಕರಉದಾತ್ತ ವಿಚಾರಧಾರೆಗಳನ್ನು ತಿಳಿಸಿ ಎಲ್ಲರಿಗೂಗಾಂಧೀಜಿ ಮತ್ತು ಶಾಸ್ತ್ರೀಯವರ ಜಯಂತಿಯ ಶುಭಕೋರಿದರು.ಶುಭದಾಗೈಡ್ಸ್ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಂದ ಸಾಮೂಹಿಕ ಪ್ರಾರ್ಥನೆಮತ್ತುಭಜನಾಕಾರ್ಯಕ್ರಮ ಮಾಡಲಾಯಿತು.

ಆಡಳಿತ ಮಂಡಳಿಯ ಸದಸ್ಯರಾದಆರ್.ಕೆ ಬಿಲ್ಲವ, ಮುಖ್ಯ ಶಿಕ್ಷಕರಾದ ರವಿದಾಸ್ ಶೆಟ್ಟಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.ಶಿಕ್ಷಕಿ ಸುಪ್ರಿಯಾ ಸ್ವಾಗತಿಸಿದರು.ಶಿಕ್ಷಕಿಪ್ರೇಮಾ ವಂದಿಸಿದರು, ಶಿಕ್ಷಕಿ ಪವಿತ್ರಾಕಾರ್ಯಕ್ರಮ ನಿರೂಪಿಸಿದರು.

# ಶ್ರೀ ಮೂಕಾಂಬಿಕಾ ದೇವಳದ ಪ.ಪೂ. ಕಾಲೇಜು ಕೊಲ್ಲೂರು : ಗಾಂಧಿಜಯಂತಿ



ಶ್ರೀ ಮೂಕಾಂಬಿಕಾ ದೇವಳದ ಪದವಿ ಪೂರ್ವ ಕಾಲೇಜು, ಕೊಲ್ಲೂರಿನಲ್ಲಿ ಗಾಂಧಿ ಜಯಂತಿ ಹಾಗೂ ಲಾಲ್ ಬಾಹದ್ದೂರ್ ಶಾಸ್ತ್ರಿಯವರ ಜನ್ಮ ದಿನಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ದೀಪ ಬೇಳಗಿಸುವುದರ ಮೂಲಕ ಚಾಲನೆಗೋಳಿಸಿ ಸಂಸ್ಥೆಯ ಪ್ರಾಂಶುಪಾಲರಾದ ಎಸ್ ಅರುಣ್‌ಪ್ರಕಾಶ್ ಶೆಟ್ಟಿಯವರು ಇಬ್ಬರು ಮಾಹಾನ್ ನಾಯಕರ ಆದರ್ಶ ಜೀವನವನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಮೌಲ್ಯಯುತ ಬದುಕನ್ನು ನಾವೆಲ್ಲರೂ ಕಟ್ಟಿಕೊಂಡು ಸಶಕ್ತ, ಸದೃಡ ರಾಷ್ಟ್ರವನ್ನು ನಿರ್ಮಾಣ ಮಾಡುವುದಕ್ಕೆ ಕಟಿಬದ್ದರಾಗುವಂತೆ ಕರೆ ನೀಡಿದರು. ದೈಹಿಕ ಶಿಕ್ಷಣ ಉಪನ್ಯಾಸಕರಾದ ಸುಕೇಶ್ ಶೆಟ್ಟಿ ಸ್ವಾಗತಿಸಿ, ನಿರೂಪಿಸಿದರು. ಸಮಾಜ ಶಾಸ್ತ್ರ ಉಪನ್ಯಾಸಕರಾದ ನಾಗರಾಜ ಅಡಿಗ ವಂದಿಸಿದರು. ಕಾರ್ಯಕ್ರಮದ ಬಳಿಕ ವಿದ್ಯಾರ್ಥಿಗಳಿಂದ ಶ್ರಮಾಧಾನ ನಡೆಯಿತು.

# ಶ್ರೀ ಪದ್ಮಾವತಿ ದೇವಿ ಹಾಗೂ ಶ್ರೀ ಜಟ್ಟಿಂಗರಾಯ ಬ್ರಹ್ಮದೇವರ ಮಹಾಸನ್ನಿಧಿಯಲ್ಲಿ ಶರನ್ನವರಾತ್ರಿ

ಅತಿಶಯ ಸಿದ್ಧಿಕ್ಷೇತ್ರ ಶ್ರೀ ಹೊಂಬುಜ ಜೈನಮಠದ ಶಾಖೆ ಶ್ರೀ ಕ್ಷೇತ್ರ ಹಟ್ಟಿಯಂಗಡಿ ಜೈನಮಠ ಶ್ರೀ ಚಂದ್ರನಾಥಾಯ ನಮಃ ಜಿನಮಂದಿರದಲ್ಲಿ ಶ್ರೀ ಪದ್ಮಾವತಿ ದೇವಿ ಹಾಗೂ ಜಟ್ಟಿಂಗರಾಯ ಬ್ರಹ್ಮದೇವರ ಮಹಾಸನ್ನಿಧಿಯಲ್ಲಿ ಶರನ್ನವರಾತ್ರಿ ಮತ್ತು ವಿಜಯದಶಮಿ ಆಚರಿಸಲು ಪ್ರತಿವರ್ಷದಂತೆ ಪರಮಪೂಜ್ಯ ಜಗದ್ಗುರು ಸ್ವಸ್ತಿ ಶ್ರೀ ಡಾ। ದೇವೇಂದ್ರ ಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಇವರ ಮಾರ್ಗದರ್ಶನದಲ್ಲಿ ಪರಂಪರೆ ಹಾಗೂ ವೈಭವದಿಂದ ಜರಗಲಿದೆ. ತಾ.7–10–2021ನೇ ಗುರುವಾರದಿಂದ ತಾ.15–10–2021ನೇ ಶುಕ್ರವಾರದವರೆಗೆ ಶರನ್ನವರಾತ್ರಿ ಧಾರ್ಮಿಕ ಉತ್ಸವಾದಿ, ಪೂಜಾ ವಿಧಿಗಳಲ್ಲಿ ಸರ್ವ ಭಕ್ತವೃಂದದವರು ಪಾಲ್ಗೊಳ್ಳಬೇಕಾಗಿ ವಿನಂತಿಸಲಾಗಿದೆ.

**ಆಹಾರ ತಿಂಡಿ ತಯಾರಿಕಾ ಯಂತ್ರಗಳು**

ಎಣ್ಣೆ ಮಿಲ್ಲು, ಹಿಟ್ಟಿನ ಗಿರಣಿ,

ಮತ್ತು ತಿಂಡಿ ತಯಾರಿಕಾ ಮಿಷನರಿಗಳ

ಮಾರಾಟ ಮತ್ತು ಸೇವೆಗಾಗಿ ಸಂಪರ್ಕಿಸಿ.

**ಸಮೃದ್ಧಿ ಟೂಲ್ಸ್ ಮತ್ತು ಇಕ್ವೂಪ್‌ಮೆಂಟ್**

ಕುಂದೇಶ್ವರ ದೇವಸ್ಥಾನದ ಹಿಂಭಾಗ, ಕುಂದಾಪುರ

ಫೋ : 8904145439

EMI ಸಾಲ ಸೌಲಭ್ಯವಿದೆ.

# ವಿದ್ಯಾರ್ಥಿ , ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿನಿಲಯ ಪ್ರವೇಶ

ಕುಂದಾಪುರ ತಾಲ್ಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಕುಂದಾಪುರ, ಬಸ್ರೂರು, ನಾವುಂದ ಮತ್ತು ಬೈಂದೂರು ಹಾಗೂ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಕುಂದಾಪುರ ಟೌನ್ , ಕೆದೂರು ಮತ್ತು ಅಮಾಸೆಬೈಲು ಇಲ್ಲಿ ಖಾಲಿ ಇರುವ ಸ್ಥಾನಗಳಿಗೆ ಹೊಸತಾಗಿ 2021–22ನೇ ಸಾಲಿನಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಸೇರ್ಪಡೆ ಮಾಡಲು ಅರ್ಜಿಗಳನ್ನು ಕರೆಯಲಾಗಿದೆ. ವರ್ಗ 1 ಹೆತ್ತವರ / ಪೋಷಕರ ವಾರ್ಷಿಕ ವರಮಾನಕ್ಕೆ ಮಿತಿಯಿರುವುದಿಲ್ಲ. ಹಾಗೂ ಇತರೆ ಹಿಂದುಳಿದ ವರ್ಗಗಳಾದ 2ಎ,ಎಬಿ,3ಎ,3ಬಿ ಹೆತ್ತವರ / ಪೋಷಕರ ವಾರ್ಷಿಕ ವರಮಾನವು ರೂ 44500/– ರೊಳಗೆ ಇರತಕ್ಕದ್ದು. ಅರ್ಜಿಗಳನ್ನು ಸಲ್ಲಿಸುವಾಗ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿ ಮತ್ತು ಆಧಾರ್ ಕಾರ್ಡ್, ರೇಷನ್ ಕಾರ್ಡ್ , ಬ್ಯಾಂಕ್ ಪಾಸ್ ಬುಕ್ ಈ ಮೇಲಿನ ಎಲ್ಲಾ ಪ್ರತಿಗಳನ್ನು ದೃಢೀಕರಿಸಿ ಲಗತ್ತಿಸಬೇಕು.

2. ವಿದ್ಯಾರ್ಥಿಗಳ ವಾಸ ಸ್ಥಾನದಿಂದ ವಿದ್ಯಾರ್ಥಿ ನಿಲಯಕ್ಕೆ ಇರುವ ದೂರ ಪ್ರಮಾಣ ಪತ್ರವನ್ನು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಿಂದ ದೃಢೀಕರಿಸಿ ಲಗತ್ತಿಸಬೇಕು. 3. ವಿದ್ಯಾರ್ಥಿಯ 2 ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಲಗತ್ತಿಸಿ ಸಲ್ಲಿಸುವುದು.

4. ಅರ್ಜಿಗಳನ್ನು 11–01–2021ರೊಳಗೆ ಸಲ್ಲಿಸಬೇಕು. ಅರ್ಜಿಗಳನ್ನು ತಾಲಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಕುಂದಾಪುರ ಹಾಗೂ ಸಂಬಂಧಪಟ್ಟ ವಿದ್ಯಾರ್ಥಿ ನಿಲಯದಿಂದ ಪಡೆದು ಸಂಬಂಧಿಸಿದ ವಿದ್ಯಾರ್ಥಿ ನಿಲಯದ ನಿಲಯ ಮೇಲ್ವಿಚಾರಕರಿಗೆ ಸಲ್ಲಿಸಬೇಕು ಎಂದು ತಿಳಿಸಲಾಗಿದೆ.

# ಮೊಗಸಾಲೆಯವರ ‘ಧರ್ಮ ಯುದ್ಧ’

ಕಾಂತಾವರ ಕನ್ನಡ ಸಂಘದ ಮೂಲಕ ಐದು ದಶಕಗಳಿಂದ ಕನ್ನಡವನ್ನು ಕಟ್ಟುವ ಕೆಲಸವನ್ನು ಮಾಡುತ್ತಾ ಬಂದಿರುವ ಉತ್ತಮ ಸಂಘಟಕರೆನಿಸಿದ ಡಾ. ನಾ ಮೊಗಸಾಲೆಯವರು ಸಂಘಟನೆಯ ಜತೆಯಲ್ಲಿ ಕಾವ್ಯ, ವೈಚಾರಿಕ–ವೈದ್ಯಕೀಯ ಲೇಖನ, ಕಾದಂಬರಿ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಮೂಲತ: ಕವಿಯಾದರೂ, ‘ಉಲ್ಲಂಘನೆ’, ‘ಮುಖಾಂತರ’ ದಂತಹ ಮಹಾಕಾದಂಬರಿ ಸೇರಿದಂತೆ 21 ಉತ್ಕೃಷ್ಟ ಕಾದಂಬರಿಗಳನ್ನು ನೀಡಿ ವರ್ತಮಾನ ಸಾಹಿತ್ಯ ಲೋಕದ ದಿಗ್ಗಜರಲ್ಲೊಬ್ಬರೆನಿಸಿದ್ದಾರೆ. ಸುಧಾ ವಾರಪತ್ರಿಕೆಯಲ್ಲಿ ಈ ವಾರದಿಂದ ಪ್ರಕಟವಾಗುತ್ತಿರುವ ‘ನೀರಿನೊಳಗಿನ ಮಂಜು’ ಮತ್ತು ಇದೀಗ ಬಿಡುಗಡೆ ಕಂಡಿರುವ ಹೊಸ ಕಾದಂಬರಿ ‘ಧರ್ಮ ಯುದ್ಧ’ ಸಾಹಿತ್ಯಾಸಕ್ತರ ನಡುವೆ ವಿಶೇಷ ಚರ್ಚೆಯಲ್ಲಿದೆ.

ಧರ್ಮ–ಧಾರ್ಮಿಕ ಅನುಷ್ಠಾನದಂತಹ ಸೂಕ್ಷ್ಮ ವಿಷಯಗಳು ಸಾಮಾನ್ಯರಿಗೆ ಭಾವನಾತ್ಮಕ ವಿಷಯವಾದರೆ ಅಧಿಕಾರದ ಚುಕ್ಕಾಣಿ ಹಿಡಿಯುವ ಕನಸು ಕಾಣುವವರಿಗೆ ಅದು ಅವರ ಗುರಿ ಸಾಧನೆಯ ಭಾಗ ಅಷ್ಟೇ. ರಾಜಪ್ರಭುತ್ವದಲ್ಲಿ ರಾಜ್ಯ ಸ್ಥಾಪನೆ, ಶಾಸನ ಸಂಚಾಲನೆಯ ಮಹತ್ವಪೂರ್ಣ ವಿಷಯಗಳಲ್ಲಿ ಯತಿಗಳು, ಧಾರ್ಮಿಕ ನಾಯಕರು ಚಕ್ರವರ್ತಿಗೆ ಸ್ಫೂರ್ತಿ–ಪ್ರೇರಣೆ ನೀಡುತಿದ್ದರು. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಧರ್ಮ ಸುಶಾಸನಕ್ಕೆ ಇಂಧನವಾಗುವ ಬದಲು ಸ್ವಾರ್ಥ ಸಾಧನೆಯ ದಾಳವಾಗಿ ಬಳಕೆಯಾಗುತ್ತಿರುವುದೇ ಹೆಚ್ಚು ಎನ್ನುವುದನ್ನು ಧರ್ಮಯುದ್ಧದಲ್ಲಿ ಮೊಗಸಾಲೆಯವರು ಸುಂದರವಾಗಿ ಚಿತ್ರಿಸಿದ್ದಾರೆ. ಶ್ರೀ ರಮಾಕಾಂತ ಜೋಶಿಯವರ ಸಾರಥ್ಯದ ಮನೋಹರ ಗ್ರಂಥಮಾಲಾ, ಧಾರವಾಡ ಇವರ ಪ್ರಕಾಶನದ ಪ್ರಸ್ತುತ ಕಾದಂಬರಿಗೆ ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ ಮುನ್ನುಡಿ ಮತ್ತು ಶ್ರೀ ನರೇಂದ್ರ ಪೈ ಅವರು ಬೆನ್ನುಡಿ ಬರೆದಿದ್ದಾರೆ.

ಸೂರಪ್ಪ ಎನ್ನುವ ಹಳ್ಳಿಯ ಮುಗ್ಧನ ಮನೆಯ ಬಾವಿಯಲ್ಲಿ ಒಂದಾದ ನಂತರ ಇನ್ನೊಂದು ಎನ್ನುವಂತೆ 3 ಕರಿ ಬೆಕ್ಕುಗಳು ಸತ್ತು ಬೀಳುವ ಸಾಮಾನ್ಯ ಘಟನೆ ಪಡೆದುಕೊಳ್ಳುವ ಆಯಾಮಗಳು, ಹುಟ್ಟು ಹಾಕುವ ಸಿಕ್ಕುಗಳು ಪಂಚಾಯತ್ ಅಧ್ಯಕ್ಷ ಸೇಸಪ್ಪನಿಂದ ಮೊದಲ್ಗೊಂಡು ತಾನಾಯಿತು ತನ್ನ ಶಾಲೆಯಾಯಿತು ಎಂದು ಹಳ್ಳಿಯ ರಾಜಕಾರಣದಿಂದ ಅಂತರ ಕಾಯ್ದುಕೊಂಡಿದ್ದ ವೆಂಕಪ್ಪ ಮಾಸ್ತ್ರವರೆಗೆ ಸಂಪೂರ್ಣ ಗ್ರಾಮಸ್ಥರನ್ನು ಒಂದಿಲ್ಲೊಂದು ರೀತಿಯಲ್ಲಿ ಕಾಡುತ್ತವೆ. ಕರಿ ಬೆಕ್ಕುಗಳ ಸಾವಿನ ಮೂಲಕ ನೆಲೆ ಇಲ್ಲದ ಪಂಜುರ್ಲಿ ತನಗೊಂದು ನೆಲೆ ಕಲ್ಪಿಸಲು ಊರ ಜನರು ಮುಂದೆ ಬರಬೇಕೆನ್ನುವ ಸಂದೇಶ ನೀಡುತ್ತಿದೆ ಎನ್ನುವ ಕೇಳು ಪಂಡಿತರ ಕವಡೆ ಜ್ಯೋತಿಷ್ಯ ವಿಶ್ಲೇಷಣೆಯಿಂದಾಗಿ ಆ ಕ್ಷಣ ಅದು ಊರಿನ ಸಮಷ್ಠಿ ಹಿತದ ವಿಷಯವಾಗಿಸಲಾಗುತ್ತದೆ.

ಪಂಜುರ್ಲಿ ಗುಡ್ಡದ ಜೀರ್ಣೋದ್ಧಾರಕ್ಕಾಗಿ ಅಷ್ಟಮಂಗಲ ಪ್ರಶ್ನೆ ಇಡಿಸುವುದು ಮತ್ತು ಬ್ರಹ್ಮಕಲಶದಂತಹ ಧಾರ್ಮಿಕ ಮಹತ್ವದ, ಜನಭಾವನೆಗೆ ಸಂಬಂಧಿಸಿದ ವಿಷಯಗಳು ಹಾವು ಏಣಿ ಆಟದಂತೆ ವಿಚಿತ್ರ ತಿರುವುಗಳನ್ನು ಪಡೆದುಕೊಳ್ಳುವುದನ್ನು ಡಾ. ಮೊಗಸಾಲೆಯವರ ಸೊಗಸಾಗಿ




ಹೆಣೆದಿದ್ದಾರೆ. ಊರಿನ ಪ್ರಗತಿಯ ಆದರ್ಶವನ್ನು ಇಟ್ಟುಕೊಂಡು ರಾಜಕಾರಣ ನಡೆಸಿಕೊಂಡಿದ್ದ ಜಯರಾಮ ಹೆಗ್ಡೆಯವರು, ವೈಜ್ಞಾನಿಕ ದೃಷ್ಟಿಕೋಣದ ವೆಂಕಪ್ಪ ಮೇಸ್ತ್ರಂತಹ ಸೈದ್ಧಾಂತವಾದಿಗಳೂ ಏನಕೇನ ಪ್ರಕರಣದಿಂದ ಹಳ್ಳಿಯ ರಾಜಕಾರಣದಲ್ಲಿ ಮಂಚೂಣಿಗೆ ಬರಲು ಹವಣಿಸುತ್ತಿರುವ ನರಸಿಂಹ ಕೋಟೆ ಮತ್ತವರ ಸಹಚರ ಸುಕ್ಕುವಿನ ಕುಟಿಲ ದಾಳಗಳ ಮುಂದೆ ಅಸಹಾಯಕರಾಗುತ್ತಾರೆ. ಸುಕ್ಕುವಿನಂತಹ ತೋಳ್ಬಲ–ಧನ ಬಲದ ಪುಢಾರಿಗಳು ನಡೆಸುವ ಛಲ–ಕಪಟಯುಕ್ತ ತಂತ್ರಗಾರಿಕೆಯ ರಾಜಕಾರಣದ ಎದುರು ಸೋಲೊಪ್ಪುತ್ತಿರುವ ಸರಳ–ಸಜ್ಜನತೆಯತ್ತ ಬೊಟ್ಟು ಮಾಡುವ ಲೇಖಕರು ಸೂಚ್ಯವಾಗಿ ಜನರನ್ನು ಎಚ್ಚರಿಸುವ ಕೆಲಸವನ್ನು ಮಾಡಿದ್ದಾರೆ.

ಗ್ರಾಮೀಣ ಸೊಗಡಿನ ಪ್ರಷ್ಠಭೂಮಿಯ ಸುಂದರ ಹಂದರದ ಕಾದಂಬರಿಯ ಪಾತ್ರಗಳನ್ನು ಕೃತಿಕಾರರು ಅದ್ಭುತ ಶಿಲ್ಪಕಾರನೋರ್ವ ತನ್ಮಯತೆಯಿಂದ ನಿರಾಕಾರ ಶಿಲೆಗೆ ಸಹಸ್ರ ಏಟು ಕೊಟ್ಟು ಜೀವ ತುಂಬುವಂತೆ ಶಬ್ಧಗಳಿಂದಲೇ ಉಸಿರು ಕೊಟ್ಟಿದ್ದಾರೆ. ಪುರ್ಬು, ರಾಗು, ಹೋಟೇಲು ಕಾಮತರು,ಕೇಳು ಪಂಡಿತರು, ಶ್ರೀಕಾಂತ ಭಟ್ಟರಂತಹ ಪೋಷಕ ಪಾತ್ರಗಳ ಸಶಕ್ತ ವರ್ಣನೆ ಓದುಗರಿಗೆ ಮುದ ಕೊಡುತ್ತವೆ. ಕೋಳಿ ಅಂಕ, ಶೇಂದಿಯಿಂದ ಓಲೆ ಬೆಲ್ಲ ಅಚ್ಚು ತಯಾರಿಕೆಯಂತಹ ಗ್ರಾಮೀಣ ಕಾಯಕಗಳ ಕುರಿತು ವಿವರಣೆಗಳು ರೋಚಕವಾಗಿವೆ.

ಡಾಕ್ಟರ್ ಶಿವರಾಮ ಕಾರಂತರ ವಿಶೇಷ ಪ್ರಭಾವ ತಮ್ಮ ಮೇಲಿದೆಯೆನ್ನುವ ಲೇಖಕರು ಕವಡೆ ಶಾಸ್ತ್ರ, ಅಷ್ಟ ಮಂಗಲ ಪ್ರಶ್ನೆ, ಬ್ರಹ್ಮ ಕಲಶದಂತಹ ಧಾರ್ಮಿಕ ವಿಧಿ–ವಿಧಾನಗಳ ಕುರಿತು ನಿಖರ, ವಸ್ತುನಿಷ್ಟ ಅಥೆಂಟಿಕ್ ವಿವರಣೆಗಳನ್ನು ನೀಡುತ್ತಾರಾದರೂ ಎಲ್ಲಿಯೂ ಅವುಗಳ ಪರ–ವಿರೋಧದ ಅಭಿಪ್ರಾಯ ಪ್ರಕಟಿಸದೇ ಓದುಗರ ವಿವೇಚನೆಗೆ ಬಿಟ್ಟು ಬಿಡುತ್ತಾರೆ. ದೇವರು–ಭೂತಾರಾಧನೆಯಲ್ಲಿನ ಭಿನ್ನತೆ, ದೇವಸ್ಥಾನಗಳಲ್ಲಿ ನಡೆಯುವ ಆಗಮಶಾಸ್ತ್ರಾಧಾರಿತ ಬ್ರಹ್ಮ ಕಲಶೋತ್ಸವ ಭೂತಾಲಯಗಳಲ್ಲಿ ನಡೆಯುವುದು ಸರಿಯೇ ಎನ್ನುವ ಕಾಮತರ ಪ್ರಶ್ನೆಗಳು ಓದುಗರನ್ನು ಚಿಂತನೆಯ ಒರೆಗೆ ಹಚ್ಚುತ್ತವೆ.

ಧಾರ್ಮಿಕ ಉನ್ಮಾದಲ್ಲಿ ಮಿಂದೆದ್ದ ಗ್ರಾಮಸ್ಥರಿಗೆ ಕರಿ ಬೆಕ್ಕು ಬಾವಿಗೆಸೆದ ರಾಗುವೇ ಮುಂದೆ ಬಂದು ಹೇಳಿದರೂ ನಂಬುವ ಸ್ಥಿತಿಯಲ್ಲಿ ಯಾರೂ ಇರುವುದಿಲ್ಲ. ಬ್ರಹ್ಮ ಕುಂಭ ಯಾರು ಹಿಡಿಯಬೇಕೆನ್ನುವ ವಿವಾದದಲ್ಲಿ ಕುಂಭ ಕೆಳಗೆ ಬಿದ್ದು ನೀರು ಚೆಲ್ಲಿ ಹೋಗುವುದು, ರಾಗು ಹೊಡೆದ ಕಲ್ಲಿನಿಂದ ಜೇನು ನೊಣ ದಾಳಿ ಇಡುವುದರಿಂದ ನೆರೆದ ಜನರು ದಿಕ್ಕಾಪಾಲಾಗಿ ಓಡುವುದರ ಮೂಲಕ ಕಾದಂಬರಿ ತಾರ್ಕಿಕ ಅಂತ್ಯ ಕಾಣುತ್ತದೆ. ಧರ್ಮ ಸೂಕ್ಷ್ಮಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ವಿವಾದಕ್ಕೆ ಒಳಗಾಗದಂತೆ ಔಚಿತ್ಯಪೂರ್ಣ ರೀತಿಯಲ್ಲಿ ಚರ್ಚಿಸಿ ಲೇಖಕರು ಜಾಣ್ಮೆ ಮೆರೆದಿದ್ದಾರೆ. ರೂ 230 ಮುಖ ಬೆಲೆಯ ‘ಧರ್ಮ ಯುದ್ಧ’ ಓದುಗರಿಗೂ ರಾಜ್ಯ ಸರ್ಕಾರದ ಹೊಸ ನಿಯಮದಂತೆ ಕೊಡುಗೆ ನೀಡುವವರಿಗೂ ನಿಸ್ಸಂಶಯವಾಗಿಯೂ ಒಂದು ಸರ್ವಶ್ರೇಷ್ಠ ಕಾದಂಬರಿ.



ಬೈಂದೂರು
ಚಂದ್ರಶೇಖರ ನಾವಡ